'ಆ ಕಚ್ಚೆಹರುಕ ಭಾಸ್ಕರರಾಯರನ್ನೇ? ಅವರ ಬಳಿ ನಿನ್ನದೇನಪ್ಪಾ ಅಂಥಾ ಘನಂಧಾರಿ ಕೆಲಸಾ? ನಿನ್ನಂಥಾ ಹುಡುಗನನ್ನು ಅವರು ಮನೆಯೊಳಗೆ ಸೇರಿಸಿದರಾ? ನಿನ್ನೊಂದಿಗೆ ಮಾತನ್ನಾಡಿದರಾ?' ಅರ್ಧ ಸಿಟ್ಟಿನಿಂದ, ಇನ್ನರ್ಧ ಅಚ್ಚರಿಯಿಂದ ಕೇಳಿದ ಆನಂದ.

'ಅವರಿಗೆ ಕೊಟ್ಟು ಬರುವಂತೆ ನನ್ನ ಚಿಕ್ಕಪ್ಪ ಒಂದು ಪತ್ರ ಕೊಟ್ಟಿದ್ದ. ಕೊಟ್ಟು ಬಂದೆ.' 'ಆ ಕಚ್ಚೆಹರುಕ' ಎಂದು ಭಾಸ್ಕರರಾಯರಿಗೆ ಹೇಳಿದ್ದನ್ನು ಕೇಳಿ ಚಿಕ್ಕಮ್ಮನ ಬದಲು ಚಿಕ್ಕಪ್ಪ ಎಂದು ಬದಲಾಯಿಸಿ ಅಂದೆ.

'ಆಯಿತು ಬಾ... ಅಪರೂಪಕ್ಕೆ ನಮ್ಮ ವಳಗೆರೆಗೆ ಬಂದಿದ್ದೀಯೆ. ನಮ್ಮ ಮನೆಗೆ ಹೋಗೋಣ' ಎಂದ ಆನಂದ.

ಅವನೊಂದಿಗೆ ಹೊರಟೆ.

ಆನಂದನ ಮನೆಗೆ ಹೋಗುವ ಹಾದಿ ಭಾಸ್ಕರರಾಯರ ಮನೆಗೆ ಹೋಗುವಷ್ಟು ಗಲೀಜಾಗಿರಲಿಲ್ಲ. ಚಿಕ್ಕ ಓಣಿಯಾದರೂ ಸ್ವಚ್ಛವಾಗಿತ್ತು. ಮಲ ಮೂತ್ರ ಕಾಣಿಸಲಿಲ್ಲ. ಸಗಣಿ ಪಗಣಿಯೂ ಬಿದ್ದು ನಾರುತ್ತಿರಲಿಲ್ಲ. ಪ್ರತಿ ಮನೆಗಳ ಎದುರೂ ರಂಗೋಲಿ ಹಾಕಿದ್ದರು.

ಎಂಟ್ಹತ್ತು ಮನೆಗಳನ್ನು ದಾಟಿ ತನ್ನ ಮನೆಗೆ ಕರೆದೊಯ್ದ ಆನಂದ. ನಾನು ವಳಗೆರೆಯ ಹೊರ ನೋಟವನ್ನು ಕಂಡಿದ್ದೆ ಅಂದು. ಕಾಫಿ ಕುಡಿಸಿ ಕಳುಹಿಸಿಕೊಟ್ಟ ಆನಂದ.

ಕಳುಹಿಸುವ ಮೊದಲು ಕೇಳಿದ: 'ನಿಜಾ ಹೇಳು... ನೀನು ಆ ಭಾಸ್ಕರರಾಯರಿಗೆ ತಂದುಕೊಟ್ಟದ್ದು ನಿನ್ನ ಚಿಕ್ಕಪ್ಪ ಕೊಟ್ಟ ಪತ್ರವಾ ಅಥವಾ ನಿನ್ನ ಚಿಕ್ಕಮ್ಮ ಕೊಟ್ಟದ್ದಾ?'

'ಯಾಕೆ ನಿನಗೆ ಈ ಅನುಮಾನ?' ಕೇಳಿದೆ ನಾನು.

'ಅಲ್ಲಾ... ಆ ಭಾಸ್ಕರರಾಯನದು ಏನಿದ್ದರೂ ಹೆಂಗಸರ ಜೊತೆಗೇ ವ್ಯವಹಾರ... ಗಂಡಸರ ಜೊತೆ ವ್ಯವಹಾರ ಕಡಿಮೆ... ಕಡಿಮೆ ಅಂದರೆ ಏನು... ಇಲ್ಲವೇ ಇಲ್ಲಾ ಅಂದರೂ ಸರಿಯೇ' ಎಂದ ಆನಂದ.

'ಚಿಕ್ಕಪ್ಪ ಕೊಟ್ಟ ಕಾಗದ ಅಲ್ಲ. ಕೊಟ್ಟದ್ದು ಚಿಕ್ಕಮ್ಮನೇ' ಎಂದು ತಿದ್ದುಪಡಿ ಮಾಡಲು ನಾನು ಹೋಗಲಿಲ್ಲ.

ಮನೆಗೆ ಮರಳಿದೆ.

ಭಾಸ್ಕರರಾಯರ ಮನೆಯ ಜಗುಲಿಯಲ್ಲಿ ನಾನು ಕಂಡಿದ್ದ, ಚಿಕ್ಕಮ್ಮ ಕೊಟ್ಟ ಪತ್ರವನ್ನು ರಾಯರಿಗೆ ಕೊಡಲು ನನ್ನಿಂದ ಇಸಿದುಕೊಂಡಿದ್ದ ಶೋಣಪ ಎರಡು ಮೂರು ದಿನಗಳ ನಂತರ ನಮ್ಮ ಮನೆಗೆ ಬಂದ. ಚಿಕ್ಕಮ್ಮನ ಜೊತೆ ಹತ್ತು ಹದಿನೈದು ನಿಮಿಷ ಏನೋ ಗುಸಾಪುಸಾ ಮಾತನಾಡಿದ. ಹೊರಟು ಹೋದ.

ಆ ಮಾರನೆಯ ದಿನ ಚಿಕ್ಕಮ್ಮ ಬೆಳಗಾ ಮುಂಚೆ ಚಿಕ್ಕಪ್ಪನಿಗೂ ನನಗೂ ತನ್ನಿಬ್ಬರು ಮಕ್ಕಳಿಗೂ ಅಡುಗೆ ಮಾಡಿಟ್ಟು ಮನೆಯಿಂದ ಹೊರಟಳು.

ಹೊರಟವಳು ತಿರುಗಿ ಬಂದದ್ದು ಸಂಜೆಯ ವೇಳೆ.

ಬರಬರುತ್ತಲೇ ನನಗೆ ಹೇಳಿದಳು: 'ಗೌರೀಪುರದಲ್ಲಿ ನಿನಗೆ ಉಳಿಯಲು ವ್ಯವಸ್ಥೆಯಾಗಿದೆ. ನಾಳೆ ಬೆಳಿಗ್ಗೆಯೇ ಸಿ.ಕೆ.ಎಂ.ಎಸ್. ಹಾಲ್ಟಿಂಗ್ ಬಸ್‌ನಲ್ಲಿ ಹೊರಡು. ಹೊರಡಲು ಎಲ್ಲಾ ತಯಾರಿ ಮಾಡಿಕೋ. ಇವರು ನಿನ್ನನ್ನು ಸ್ಕೂಲ್‌ಗೆ ಸೇರಿಸಿ, ಹಾಸ್ಟೆಲ್‌ಗೆ ಸೇರಿಸಿ ಹಾಸ್ಟೆಲ್‌ನಲ್ಲಿ ಬಿಟ್ಟು ಬರುತ್ತಾರೆ.'

ಕವಳ ಜಗಿಯಲು ನಾಗವಳ್ಳಿ ಎಲೆಗೆ ಸುಣ್ಣ ಸವರುತ್ತಿದ್ದ ಚಿಕ್ಕಪ್ಪ ಹೆಂಡತಿಯ ಮುಖ ನೋಡಿದ.